

# ಚದುರಂಗದ ಕಾಯಿಗಳು

ಭಾರತೀಯ ಮೂಲದ ಚದುರಂಗ (ಚೆಸ್) ಆಟ ಯಾರಿಗೆ ಗೊತ್ತಿಲ್ಲ? ರಾಜ, ಮಂತ್ರಿ, ಆನೆ, ಒಂಟೆ, ಕಾಲಾಳು ಮುಂತಾದ ಕಾಯಿಗಳನ್ನು 64 ಚೌಕಾಕಾರದ ಕರಿ, ಬಿಳಿ ಮನೆಗಳಲ್ಲಿ ನಡೆಸುತ್ತಾ ಆಡುವ ಬುದ್ಧಿವಂತಿಕೆಯ, ಕೌಶಲ್ಯಪೂರ್ಣ ಒಳಾಂಗಣದ ಆಟವಿದು. ಈ ಆಟಕ್ಕೆ 1500ಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವಿದೆ.

ವೈವಿಧ್ಯಮಯ ಚೆಸ್ ಕಾಯಿಗಳನ್ನು ಸಂಗ್ರಹಿಸುವುದೇ ಸಾವಿರಾರು ಜನರ ಹವ್ಯಾಸವಾಗಿದೆ. ಪುರಾತನ ಚೆಸ್ ಆಟದ ಮಣೆ ಹಾಗೂ ಕಾಯಿಗಳು ಪ್ರಪಂಚದ ಎಲ್ಲೆಡೆ ಮ್ಯೂಸಿಯಂಗಳಲ್ಲಿ ನೋಡ ಸಿಗುತ್ತವೆ. ಇತ್ತೀಚೆಗೆ 'ಆಧುನಿಕ ಕಲೆ'ಯ ಹಿನ್ನೆಲೆಯಲ್ಲಿ ಈ ಕಾಯಿಗಳನ್ನು ತಯಾರಿಸುವ ಕಲಾವಿದರು ಇನ್ನಷ್ಟು ಹೆಚ್ಚು ಕೌಶಲ್ಯವನ್ನು ಮೆರೆಯುತ್ತಿದ್ದಾರೆ. ಕಾಯಿಗಳ ಮೂಲಕ ಭಾವಾಭಿವ್ಯಕ್ತಿ ಹಾಗೂ ವಿನ್ಯಾಸ ನಿಜಕ್ಕೂ ಅದ್ಭುತ ಎನ್ನಿಸುವಂತಿವೆ. ಅಂದ ಹಾಗೆ ಕಲಾವಿದರ ಭಾವಾಭಿವ್ಯಕ್ತಿಗೆ ಇಲ್ಲಿ ನಿರ್ದಿಷ್ಟ ಸೂತ್ರಗಳ ಕಟ್ಟುಪಾಡುಗಳ್ಯಾವುವೂ ಅಡ್ಡಿ ಬಂದಿಲ್ಲ.

■ ವಿದ್ಯಾ ಹಾಲಭಾವಿ





